ಅವರಿಗೆ ಡೊನೇಷನ್ನೂ ಬೇಕು. ಕೆಎಸ್ಆರ್‌ಟಿಸಿ ಬಿಟ್ಟೀ ಬಸ್ ಕೂಡ ಬೇಕು ಅಂದರೆ ಇದು ಯಾವ ನಿಯಮ ಎಂದು ನನಗೆ ಅರ್ಥ ಆಗುತ್ತಾ ಇಲ್ಲ. ಈ ಮೂಲಕ ಸಾರ್ವಜನಿಕರಿಗೆ ಹೇಳುವುದು ಇಷ್ಟೆ. ಯಾವುದೇ ವಿದ್ಯಾ ಸಂಸ್ಥೆಗೆ ನಮ್ಮ ರನ್ನಿಂಗ್ ಕಂಡೀಷನ್‌ನಲ್ಲಿರುವ ಸ್ಕ್ರ್ಯಾಪ್ ಬಸನ್ನು ತೀರಾ ಚೀಪ್ ರೇಟ್‌ಗೆ ಕೊಡುತ್ತೇವೆ. ಅವರು ಎಲ್ಲೋ ಕಲರ್ ಹಾಕಿ ಓಮ್ನಿ ಬಸ್ ಎಂದು ಓಡಿಸಿದರೆ ಟ್ಯಾಕ್ಸಾ ಕಡಿಮೆ ಆಗುತ್ತದೆ. ಆದಕ್ಕೆ ಬರೀ ಒಬ್ಬ ಡ್ರೈವರ್ ಸಾಕು. ಮೇಂಟೇನ್ ಮಾಡಿಕೊಳ್ಳಬೇಕಾಗುತ್ತದೆ. ಮಕ್ಕಳ ಹತ್ತಿರ ಹಣ ಕಲೆಕ್ಟ್ ಮಾಡುತ್ತಾರೆ. ಇಷ್ಟೂ ಮಾಡಲು ತಯಾರು ಇಲ್ಲವೇ? ಪ್ರತಿಯೊಂದಕ್ಕೂ ಕೆಎಸ್ಆರ್‌ಟಿಸಿ ಎಂದರೆ ಕೆಎಸ್ಆರ್‌ಟಿಸಿ ವೈಂಡ್‌ಅಪ್ ಮಾಡಬೇಕು ಇಲ್ಲವೇ ಒಂದು ದಿವಸ ಇದು ಸರ್ವನಾಶ ಆಗಬೇಕು.

3. ಮಂಗಳೂರು ಸಿಟಿ ಬಸ್ಸುಗಳ ವೇಗ ನಿಯಂತ್ರಿಸುವ ಬಗ್ಗೆ.

ಶ್ರೀ ಬಿ.ಎಂ. ಇದಿನಬ್ಬ (ಉಲ್ಲಾಳ) : ಮಾನ್ಯ ಅಧ್ಯಕ್ಷರೇ ಮಂಗಳೂರಿನಲ್ಲಿ ಸಿಟಿ ಬಸ್ಸುಗಳ ಮೇಲಾಟ, ಮಿತಿಮೀರಿದ ವೇಗ, ಓವರ್‌ಲೋಡ್, ಓವರ್‌ಟೇಕ್ ಇದು ದಿನನಿತ್ಯದ ಸುದ್ದಿಯಾಗಿದೆ. ಮಂಗಳೂರು ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ದಿನನಿತ್ಯ ಎಂಬಂತೆ ಅಪಘಾತಗಳು ಆಗುತ್ತಲೇ ಇವೆ. ಇದೀಗ ಮಂಗಳೂರಿನ ಉಲ್ಲಾಳ ಬಾಗಿನಲ್ಲಿ 13-3-92ರಂದು ಇಬ್ಬರು ಬಾಲಕರನ್ನು ಬಲಿ ತೆಗೆದುಕೊಂಡಿದೆ. ಬಾಲಕರ ತಂದೆ ವಿಶೇಷ ರೀತಿಯ ಪೆಟ್ಟಿಗೆ ಬಲಿಯಾಗಿದ್ದಾನೆ.

ಆದಕಾರಣ ಮಂಗಳೂರಿನಲ್ಲಿ ಸಿಟಿ ಬಸ್ಸುಗಳ ವೇಗವನ್ನು ತಡೆಗಟ್ಟಲು ಗವರ್ನರ್ ಅಳವಡಿಕೆ ಮಾಡಬೇಕು. ವೇಗಕ್ಕೂ, ಮೇಲಾಟಕ್ಕೂ ಓವರ್ ಲೋಡಿಗೂ ಸರಿಯಾದ ಮಿತಿ ಇರಬೇಕು. ಸೂಕ್ತ ತನಿಖೆಗಳು ಇರುವಂತಾಗಬೇಕು: ಒಂದು ವೇಳೆ ಮಂಗಳೂರಿನಲ್ಲಿ ಸಿಟಿ ಬಸ್ ರಾಷ್ಟ್ರೀಕರಣ ಮಾಡುವ ಯೋಚನೆ ಇದೆಯೇ? ಈ ಕುರಿತು ಸಾರಿಗೆ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಆಜೇಜ್ ಸೇಟ್ (ಸಾರಿಗೆ ಸಚಿವರು) : ಮಾನ್ಯ ಅಧ್ಯಕ್ಷರೇ. ಇದು ಸಾರಿಗೆ ಇಲಾಖೆಗೆ ಸಂಬಂಧಪಟ್ಟದ್ದಲ್ಲ. ಗೃಹಮಂತ್ರಿಗಳಿಗೆ ಸಂಬಂಧಪಟ್ಟದ್ದಾಗಿರುತ್ತದೆ.

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷಿಣಿಯವರೇ ಈ ವಿಚಾರ ಮಾನ್ಯ ಗೃಹಮಂತ್ರಿಗಳಿಗೆ ಸಂಬಂಧಪಟ್ಟದ್ದು. ಆದ್ದರಿಂದ ಮಾನ್ಯ ಗೃಹಮಂತ್ರಿಗಳ ಪರವಾಗಿ ಈ ಹೇಳಿಕೆಯನ್ನು ಮಾಡುತ್ತೇನೆ.

ಮಂಗಳೂರು ನಗರ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಸಂಭವಿಸಿರುವ ಅಪಘಾತಗಳ ವಿವರ ಈ ಪ್ರಕಾರವಿದೆ :

ವರ್ಷ	ಅಪಘಾತಗಳ ಸಂಖ್ಯೆ	ಮರಣಾಂತ ಅಪಘಾತಗಳ ಸಂಖ್ಯೆ
1989	260	20
1990	215	17
1991	207	26
1992	47	6

(17-3-1992ರವರೆಗೆ)

ದಿನಾಂಕ 1-5-1991ರಂದು ಮಂಗಳೂರಿನ ಪ್ರಾದೇಶಿಕ ಸಾರಿಗೆ ಅಧಿಕಾರಿಯ ಕಛೇರಿಯಲ್ಲಿ ಒಟ್ಟು 42137 ವಾಹನಗಳನ್ನು ನೋಂದಣಿ ಮಾಡಲಾಗಿತ್ತು. ದಿನಾಂಕ 31-1-92ರಂದು ನೋಂದಣಿಯಾದ ವಾಹನಗಳ ಸಂಖ್ಯೆ 65195ಕ್ಕೆ ಏರಿದೆ. ಈ ಅಂಶಗಳನ್ನು ಗಮನಿಸಿದಾಗ ವಾಹನಗಳ ಸಂಖ್ಯೆ ಗಣನೀಯ ಪ್ರಮಾಣದಲ್ಲಿ ಹೆಚ್ಚಿರುವುದು ಕಂಡುಬರುತ್ತದೆ. ಆದರೂ ಮೋಟಾರು ವಾಹನಗಳ ಅಪಘಾತಗಳ ಸಂಖ್ಯೆ ಅದೇ ಪ್ರಮಾಣದಲ್ಲಿ ಹೆಚ್ಚಿಲ್ಲ ಎಂಬುದು ಹಾಗೂ ಅಲ್ಪ ಪ್ರಮಾ>ದಲ್ಲಿ ಕಡಿಮೆ ಆಗಿರುವುದು ಕಂಡುಬರುತ್ತದೆ.

ಮೋಟಾರು ವಾಹನಗಳ ಅಪಘಾತಗಳನ್ನು ತಡೆಯುವ ದೃಷ್ಟಿಯಿಂದ ಪೋಲೀಸ್ ಇಲಾಖೆಯು ಅನೇಕ ಕ್ರಮಗಳನ್ನು ಕೈಗೊಂಡಿದೆ. ಅವುಗಳಲ್ಲಿ ಮೋಟಾರು ವಾಹನಗಳ ಕಾಯಿದೆ ಉಲ್ಲಂಘನೆ ಮಾಡುವರ ವಿರುದ್ಧ ಕ್ರಮ ಜರಗಿಸುವುದು ಒಂದಾಗಿದೆ. 1990ನೇ ಸಾಲಿನಲ್ಲಿ 26281 ಅಪರಾಧಗಳನ್ನು ದಾಖಲಿ ಮಾಡಲಾಗಿದ್ದು. 1991ರಲ್ಲಿ 25592 ಅಪರಾಧಗಳನ್ನು ಹಾಗೂ 1992ರಲ್ಲಿ ಇಲ್ಲಿಯವರೆಗೆ 5591 ಅಪರಾಧಗಳನ್ನು ದಾಖಲೆ ಮಾಡಿಕೊಳ್ಳಲಾಗಿದೆ. ಅದೇ ಪ್ರಕಾರ 1990ರಲ್ಲಿ ಓವರ್‌ಲೋಡ್ ಮಾಡಿದ ಬಗ್ಗೆ 1078 ಕೇಸ್‌ಗಳನ್ನು (ಪ್ರಕರಣಗಳನ್ನು) 1991ರಲ್ಲಿ 1714 ಪ್ರಕರಣಗಳನ್ನು ಹಾಗೂ 1992ರಲ್ಲಿ ಇಲ್ಲಿಯವರೆಗೆ 755 ಪ್ರಕರಣಗಳನ್ನು ಹಾಕಲಾಗಿದೆ. ವೇಗಮಿತಿ ಮೀರಿ ಚಲಿಸುವ ವಾಹನ ಚಾಲಕರ ವಿರುದ್ಧ 1990ರಲ್ಲಿ 566. 1991ರಲ್ಲಿ 1739 ಹಾಗೂ 1992ರಲ್ಲಿ ಇಲ್ಲಿಯವರೆಗೆ 764 ಮೊಕದ್ದಮೆಗಳನ್ನು ಹೂಡಲಾಗಿದೆ. ಇದಲ್ಲದೆ. ಅತಿವೇಗದಿಂದ ಮತ್ತು ನಿರ್ಲಕ್ಷದಿಂದ ವಾಹನ ನಡೆಸುವ ಚಾಲಕರ ವಿರುದ್ಧ ಸಹ ಮೊಕದ್ದಮೆಗಳನ್ನು ಹಾಕಲಾಗಿದೆ. ಈ ಅಂಕಿ ಅಂಶಗಳನ್ನು ಗಮನಿಸಿದಾಗ ನಿಯಮಗಳನ್ನು ಉಲ್ಲಂಘನೆ ಮಾಡುವ ಚಾಲಕರ ವಿರುದ್ಧ ಪ್ರಕರಣವನ್ನು ನೋಂದಾಯಿಸಿರುವುದು ಕಂಡುಬರುತ್ತದೆ.

ದಿನಾಂಕ 13-3-1992ರಂದು ಬಲ್ಲಾಳ ಭಾಗ ಪ್ರದೇಶದಲ್ಲಿ ಆದ ನತದೃಷ್ಟ ಅಪಘಾತದ ನಂತರ ಟ್ರಾಫಿಕ್ ಸಿಬ್ಬಂದಿ ಅಲ್ಲದೆ ಪೋಲೀಸ್ ಇಲಾಖೆಯ ಇತರ ಸಿಬ್ಬಂದಿಗಳು ಕೂಡ ವಾಹನಗಳನ್ನು ತಪಾಸಣೆ ಮಾಡುವ ಕಾರ್ಯವನ್ನು ಅತ್ಯಂತ ತ್ವರಿತ ಗತಿಯಲ್ಲಿ ನಿರ್ವಹಿಸುತ್ತಿದ್ದಾರೆ. ಇದಲ್ಲದೆ ಗ್ರಾಮಾಂತರ ಪ್ರದೇಶಗಳಲ್ಲಿಯೂ ಕೂಡ ಇದೇ ರೀತಿ ವಾಹನಗಳ ತಪಾಸಣೆ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗಿದೆ. ಮೋಟಾರು ವಾಹನಗಳ ಮಾಲೀಕರ ಸಂಘ. ವಾಹನ ಚಾಲಕರ ಸಂಘ. ಟ್ಯಾಕ್ಸಿ ಚಾಲಕರ ಸಂಘ ಈ ಸಂಘಗಳೊಂದಿಗೆ ಜಿಲ್ಲಾ ಪೋಲೀಸ್ ಅಧಿಕಾರಿ ಅವರು ಅಪಘಾತಗಳನ್ನು ತಪ್ಪಿಸುವ ಸಲುವಾಗಿ ಸರ್ವೆ ನಡೆಸಿದ್ದಾರೆ. ವಾಹನಗಳಲ್ಲಿ ಹೆಚ್ಚಿನ ಜನರನ್ನು ತುಂಬುವುದು. ಅತಿ ಹೆಚ್ಚಿನ ವೇಗದಲ್ಲಿ ಹಾಗೂ ನಿರ್ಲಕ್ಷ್ಯದಿಂದ ವಾಹನವನ್ನು ನಡೆಸುವುದರ ಬಗ್ಗೆ ಈ ಸಂಘಗಳಿಗೆ ಎಚ್ಚರಿಕೆ ನೀಡಲಾಗಿದೆ. ಅಲ್ಲದೆ ವಾಹನ ಚಾಲಕರಿಗೆ ತರಬೇತಿ ನೀಡಲು ವಿಪ್ಪಾಡು ಮಾಡಲಾಗಿದೆ. ವಾಹನ ಚಾಲಕರಿಗೆ ಮೋಟಾರು ವಾಹನ ನಿಯಮಗಳ ಬಗ್ಗೆ ಹೆಚ್ಚಿನ ತಿಳುವಳಿಕೆ ನೀಡಲಾಗುತ್ತದೆ. ಸಾರ್ವಜನಿಕರಿಗೂ ಕೂಡ ಈ ವಿಚಾರದಲ್ಲಿ ತಿಳುವಳಿಕೆ ನೀಡಲಾಗುತ್ತಿದ್ದು ನಿಯಮಗಳ ಮೇರೆಗೆ ಮಿತಿಯಂತೆ ವಾಹನಗಳಲ್ಲಿ ಪ್ರಯಾಣ ಮಾಡಬೇಕೆಂದು ಕೋರಲಾಗಿದೆ. ನಗರ ಪ್ರದೇಶಗಳಲ್ಲಿ 25 ಕಿ.ಮೀ. ನಿಂದ 40 ಕಿ.ಮೀ. ವೇಗದಲ್ಲಿ ಮಾತ್ರ ವಾಹನಗಳನ್ನು ನಡೆಸುವಂತೆ ನಿಬಂಧನೆಗಳನ್ನು ಹೇರಲಾಗಿದೆ. ಮಿತಿಮೀರಿದ ವೇಗದಲ್ಲಿ ಚಲಿಸುವ ವಾಹನಗಳನ್ನು ರಾಡಾರ್ ಗನ್ ಉಪಕರಣದ ಉಪಯೋಗ ಮಾಡಿಕೊಂಡು ಮೋಟಾರು ವಾಹನಗಳ ನಿಯಮಗಳನ್ನು ಉಲ್ಲಂಘನೆ ಮಾಡುವ ಚಾಲಕರ ವಿರುದ್ಧ ಮುಂದಿನ ಕ್ರಮ ಕೈಗೊಳ್ಳಲಾಗುತ್ತಿದೆ. ಪ್ರಾದೇಶಿಕ ಸಾರಿಗೆ ಅಧಿಕಾರಿಯವರಿಗೂ ವರದಿ ಕಳುಹಿಸಿಕೊಡಲಾಗುತ್ತಿದೆ.

ಇವುಗಳಲ್ಲದೆ. ರಸ್ತೆ ಕಾಮಗಾರಿ. ಮಾಡಲು. ರಸ್ತೆ ಉಬ್ಬುಗಳನ್ನು ಹಾಕುವ ಬಗ್ಗೆ. ಹಾಗೂ ಎಚ್ಚರಿಕಾ ಫಲಕಗಳನ್ನು ಹಾಕಲು ಮಂಗಳೂರು ನಗರ ಪುರಸಭೇಯನ್ನು ಕೇಳಿಕೊಳ್ಳಲಾಗಿದೆ. ಸ್ಪೀಡ್ ಗವರ್ನರ್‌ಗಳನ್ನು ವಾಹನಗಳಿಗೆ ಅಳವಡಿಸುವ ವಿಚಾರ ಪರಿಶೀಲನೆಯಲ್ಲಿದೆ.

4. ಪುತ್ತೂರು ತಾಲ್ಲೂಕು "ಕಡಬ" ವಿದ್ಯುತ್ ಸಬ್‌ಸ್ಟೇಷನ್ ಕಾಮಗಾರಿಯನ್ನು ಕೈಗೊಳ್ಳುವ ಬಗ್ಗೆ.

ಶ್ರೀ ಕೆ. ಕುಶಾಲ (ಸುಳ್ಯ) : ಮಾನ್ಯ ಅಧ್ಯಕ್ಷರೇ. ಸುಳ್ಯ ವಿಧಾನ ಸಭಾ ಕ್ಷೇತ್ರದ ಪುತ್ತೂರು ತಾಲ್ಲೂಕಿ "ಕಡಬ" ವಿದ್ಯುತ್ ಸಬ್ ಸ್ಟೇಷನ್ ಮಂಜೂರಾಗಿ ಎಷ್ಟು ವರ್ಷ ಸಂದಿದೆ? ಸದ್ರಿ ಕಾಮಗಾರಿಯನ್ನು ಪ್ರಾರಂಭಿಸಲಾಗಿದೆಯೇ? ಸದ್ರಿ ಕಾಮಗಾರಿಯನ್ನು ಮಂಜೂರು ಮಾಡಿ ಇಷ್ಟು ವರ್ಷಗಳಾದರೂ ಕೆಲಸ ಕೈಕೊಳ್ಳದಿರಲು ಕಾರಣವೇನು? ಈ ಕಡಬ ಸಬ್ ಸ್ಟೇಷನ್‌ನಿಂದ ಶ್ರೀ ಕುಕ್ಕೆಸುಬ್ರಹ್ಮಣ್ಯ ಪುಣ್ಯಕ್ಷೇತ್ರಕ್ಕೂ. ವಿದ್ಯುತ್ ಇಲ್ಲದೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೆ? ಆದುದರಿಂದ ಈ ಕಾಮಗಾರಿಯನ್ನು ಯಾವಾಗ ಕೈಗೊಂಡು ಪ್ರಾರಂಭಿಸಲಾಗುವುದು. ಮತ್ತು ಕಾಮಗಾರಿಯನ್ನು ಪೂರೈಸಲು ಸರಕಾರ ಈಗಲಾದರೂ ಏನು ಕ್ರಮ ಕೈಗೊಳ್ಳುವುದು ಎಂದು ತಿಳಿಯಬಯಸುತ್ತೇನೆ.

ಶ್ರೀ ಎಂ. ರಾಮಪ್ಪ (ಇಂಧನ ರಾಜ್ಯ ಸಚಿವರು) : ಮಾನ್ಯ ಅಧ್ಯಕ್ಷರೆ. ಸುಬ್ರಹ್ಮಣ್ಯ ಪುಣ್ಯ ಕ್ಷೇತ್ರಕ್ಕೆ ಈಗ ವಿದ್ಯುಚ್ಛಕ್ತಿಯನ್ನು ಸೂಳ್ಯದಿಂದ 11 ಕೆ.ವಿ. ಲೈನಿನ ಮೂಲಕ ಸರಬರಾಜು ಮಾಡಲಾಗುತ್ತಿದೆ. ಕಡಬದಲ್ಲಿ 33 ಕೆ.ವಿ. ವಿದ್ಯುತ್ ಉಪ-ಕೇಂದ್ರವನ್ನು ಸ್ಥಾಪಿಸಲು ಯೋಜಿಸಿದ್ದು. ಇದರ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಈ ಕೆಲಸವು ಐದಾರು ತಿಂಗಳುಗಳಲ್ಲಿ ಮುಗಿಯುವ ನಿರೀಕ್ಷೆಯಿದೆ. ಈ ವಿದ್ಯುತ್ ಉಪ ಕೇಂದ್ರವು ಮುಗಿದ ನಂತರ. ಕಡಬ ವಿದ್ಯುತ್ ಉಪ ಕೇಂದ್ರದಿಂದ ಸುಬ್ರಹ್ಮಣ್ಯ ಪುಣ್ಯ ಕ್ಷೇತ್ರಕ್ಕೆ ವಿದ್ಯುಚ್ಛಕ್ತಿಯನ್ನು ಸರಬರಾಜು ಮಾಡಲಾಗುವುದು. ಈ ಸಬ್ ಸ್ಟೇಷನ್ ಮಂಜೂರಾಗಿ ಸುಮಾರು ಎರಡೂವರೆ ವರ್ಷಗಳಾಗಿರುತ್ತದೆ. ಈ ಸಬ್‌ಸ್ಟೇಷನ್ ಅನ್ನು ಒಂದೂವರೆ ವರ್ಷದಲ್ಲಿ ಮಾಡಿಸಿಕೊಡುತ್ತೇನೆ.

5. ಮೂಡಬಿದ್ರೆಯಲ್ಲಿ ಏತನೀರಾವರಿ ಯೋಜನೆಯ ಕಾಮಗಾರಿಯನ್ನು ಪೂರ್ತಿಗೊಳಿಸುವ ಬಗ್ಗೆ.

ಶ್ರೀ ಕೆ. ಸೋಮಪ್ಪ ಸುವರ್ಣ (ಮೂಡಬಿದ್ರೆ) : ನನ್ನ ಮೂಡುಬಿದ್ರೆ ಕ್ಷೇತ್ರದ ಏತ ನೀರಾವರಿ ಯೋಜನೆಯಂತ ಬಳಕುಂಜೆ. ಏಳಿಂಜೆ ಮತ್ತು ಮೂಡಬಿದ್ರಿಯ ಮಾರೂರು ಗ್ರಾಮಗಳಲ್ಲಿ ಮಂಜೂರಾತಿ ಒದಗಿದ್ದರು ಮೂಡಬಿದ್ರಿಯ ಫಿರ್ಕಾದ ಮಾರೂರು ಗ್ರಾಮದ ಸರ್ವೆ ಕಾರ್ಯವನ್ನು ಪೂರ್ತಿಗೊಳಿಸದೆ ಇಲ್ಲಿಗೆ ಈತನಕ ಸಂಬಂಧಿತ ಅಧಿಕಾರಿಗಳು ಬಾರದೆ ಕೆಲಸ ಬಹಳ ನಿಧಾನವಾಗಿರುತ್ತದೆ. ಹೀಗಾಗಿ ಈ ಕೆಲಸಗಳನ್ನು ಕೂಡಲೇ ತ್ವರಿತಗತಿಯಲ್ಲಿ ಮಾಡುವಂತೆ ನಾನು ನೀರಾವರಿ ಸಚಿವರ ಗಮನ ಸೆಳೆಯಬಯಸುತ್ತೇನೆ. ಮಾತ್ರವಲ್ಲದೇ ಈ ಕಾಮಗಾರಿಗಳ ಪ್ರಗತಿಯ ವಿವರ ತಿಳಿಯಲು ಬಯಸುತ್ತೇನೆ. ಈ ಕೆಲಸಗಳನ್ನು ಯಾವಾಗ ಪೂರ್ತಿಗೊಳಿಸಲಾಗುವುದು ಎಂದು ತಿಳಿಯಬಯಸುತ್ತೇನೆ.

ಶ್ರೀ ಕೆ.ಎಸ್. ಮಲ್ಲಿಕಾರ್ಜುನ ಪ್ರಸನ್ನ (ಸಣ್ಣ ನೀರಾವರಿ ರಾಜ್ಯ ಸಚಿವರು) : ಮಾನ್ಯ ಅಧ್ಯಕ್ಷರೇ. ತಮ್ಮ ಅನುಮತಿ ಕೋರಿ ಈ ಹೇಳಿಕೆಯನ್ನು ನೀಡಬಯಸುತ್ತೇನೆ.

ಏತ ನೀರಾವರಿ ನಿಗಮಗಳಿಂದ ಕೈಗೊಳ್ಳುವ ಏತ ನೀರಾವರಿ ಯೋಜನೆಗಳಿಗೆ ಯೋಜನಾ ವೆಚ್ಚದ ಶೇಕಡಾ 75ರಷ್ಟು ಹಣವನ್ನು ಆರ್ಥಿಕ ಸಂಸ್ಥೆಗಳಿಂದ ಸಾಲವಾಗಿ ಪಡೆಯಬೇಕಾಗಿದೆ. ಕಾವೇರಿ ಜಲಾನಯನ ಏತ ನೀರಾವರಿ ನಿಗಮದಿಂದ ಮಾಡಬಿದ್ರಿ ಕ್ಷೇತ್ರದಲ್ಲಿ ಕೈಗೊಳ್ಳಲು ಉದ್ದೇಶಿಸಿರುವ ಏತ